**ಅಸಲು ದಾವಾ ನಂಃ84/2022**
**ಪಿ.ಡಬ್ಲ್ಯೂ:01**

**ದಿನಾಂಕಃ 05-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಟಿ ಟಿ ಪ್ರತಿವಾದಿ ಪರ ವಕೀಲರಿಂದ**

ನಾನು ಪ್ರತಿವಾದಿಯ ಜಮೀನನ್ನು 10-15 ವರ್ಷ ಸಾಗುವಳಿ ಮಾಡಿರುತ್ತೇನೆ. ಯಾವ ಇಸವಿಯಿಂದ ಯಾವ ಇಸವಿಯವರೆಗೆ ಅಂತ ನೆನಪಿರುವುದಿಲ್ಲ. ಸದರಿ ಜಮೀನಿನಿಂದ ಬಂದ ಫಸಲನ್ನು ಮಾರುಕಟ್ಟೆಗೆ ಮಾರಾಟ ಮಾಡಲು ಇಬ್ಬರು ಒಟ್ಟಾಗಿ ಹೋಗುತ್ತಿದ್ದೇವು. ಈರುಳ್ಳಿ, ದಾಳಿಂಬೆ, ರಾಗಿ, ಟೋಮೋಟೋ ಮತ್ತು ಜೋಳದ ಬೆಳೆಗಳನ್ನು ಬೆಳೆಯುತ್ತಿದ್ದೇವು. ಸಾಗುವಳಿ ಮಾಡಿ ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದಾಗ ಬೆಳೆದ ರೈತನ ಹೆಸರನ್ನು ರಶೀದಿಯಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. ಪ್ರತಿವಾದಿಯು ಎಂದಿಗೂ ಮಾರುಕಟ್ಟೆಗೆ ಬಂದಿರುವುದಿಲ್ಲ ಬದಲಾಗಿ ಬೆಳೆದ ಬೆಳೆಯನ್ನು ನಾನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಬಂದ ಹಣವನ್ನು ಮತ್ತು ಬಿಲ್ ನ್ನು ಪ್ರತಿವಾದಿಗೆ ನೀಡುತ್ತಿದ್ದೆ ಎಂದರೆ ಸುಳ್ಳು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯನ್ನು ಒಪ್ಪಿಕೊಂಡ ಕಾರಣ ನಿಡಿಃ1 ಎಂದು ಗುರುತಿಸಲಾಯಿತು. ನಿಡಿಃ1 ದಿಃ28-09-2013 ರ ರಶೀದಿಯಾಗಿರುತ್ತದೆ. ಸದರಿ ನಿಡಿಃ1 ರ ರಶೀದಿಯ ಪ್ರಕಾರ ನಾನು ಶ್ರೀ ಧನಲಕ್ಷ್ಮೀ ಟ್ರೇಡಿಂಗ್ ಕಂಪನಿಗೆ ಸ್ವತಃ ಹೋಗಿ ಬೆಳೆದ ಬೆಳೆಯನ್ನು ಮಾರಾಟ ಮಾಡಿ ನನ್ನ ಹೆಸರಿಗೆ ರಶೀದಿಯನ್ನು ತಂದು ಹಣವನ್ನು ಪ್ರತಿವಾದಿಗೆ ನೀಡುತ್ತಿದ್ದೆ ಎಂದರೆ ಸುಳ್ಳು. ಬೆಳೆದ ಬೆಳೆಯನ್ನು ಮಾರಾಟ ಮಾಡಿದವರ ಹೆಸರನ್ನು ನಿಡಿಃ1 ರ ರಶೀದಿಯಲ್ಲಿ ನೀಡಲಾಗುತ್ತದೆ ಎಂದರೆ ಸುಳ್ಳು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯನ್ನು ಒಪ್ಪಿಕೊಂಡ ಕಾರಣ ನಿಡಿಃ2 ಎಂದು ಗುರುತಿಸಲಾಯಿತು. ನಿಡಿಃ2 ದಿಃ17-12-2016 ರ ರಶೀದಿಯಾಗಿರುತ್ತದೆ. ಸದರಿ ನಿಡಿಃ2 ರ ರಶೀದಿಯ ಪ್ರಕಾರ ನಾನು 7-8 ವರ್ಷಗಳಿಂದ ಪ್ರತಿವಾದಿಗೆ ಹಣವನ್ನು ಕೊಡಲು ರಶೀದಿಯ ಸಮೇತ ಹೋಗುತ್ತಿದ್ದೆ ಎಂದು ಸೂಚಿಸಿದ ಪ್ರಶ್ನೆ ಸಾಕ್ಷಿಯು ಕೆಲವು ಬಾರಿ ಪ್ರತಿವಾದಿ ಮತ್ತು ಕೆಲವು ಬಾರಿ ಪ್ರತಿವಾದಿಯ ಮಗ ನನ್ನೊಂದಿಗೆ ಮಾರುಕಟ್ಟೆಗೆ ಬರುತ್ತಿದ್ದರು ಎಂದು ಉತ್ತರಿಸುತ್ತಾರೆ. ಕಳೆದ 2017 ರಿಂದ ಪ್ರತಿವಾದಿಯ ಜಮೀನಿನಲ್ಲಿ ಬೆಳೆದ ಬೆಳೆಯಿಂದ ಬಂದ ಆದಾಯವನ್ನಾಗಲೀ ಅಥವಾ ರಶೀದಿಯನ್ನಾಗಲೀ ಪ್ರತಿವಾದಿಗೆ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿಯು ಸದರಿಯವರ ಜಮೀನನ್ನು ವ್ಯವಸಾಯ ಮಾಡಲು ನನಗೆ ನಿರಾಕರಿಸಿದರು ಎಂದರೆ ಸುಳ್ಳು.

ಪ್ರತಿವಾದಿಯು ನನ್ನ ಬಳಿ ಸಾಲವನ್ನು ಪಡೆದು ನಿಪಿಃ1 ರ ಪ್ರಾಂಸರಿ ಪತ್ರಕ್ಕೆ ಒಂದು ಸಹಿಯನ್ನು ಮಾಡಿರುತ್ತಾರೆ. ಅದೇ ರೀತಿಯಾಗಿ ಸಾಕ್ಷಿದಾರರಾಗಿ ಜಿ ಎಲ್ ಪ್ರಸನ್ನ ಮತ್ತು

ಕಂಪಾಲಯ್ಯ ಸಹಿ ಮಾಡಿರುತ್ತಾರೆ. ಸದರಿ ಸಾಕ್ಷಿದಾರರು ಎಷ್ಟು ಸಹಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಪ್ರತಿಯೊಬ್ಬ ಸಾಕ್ಷಿಯು ಒಂದೊಂದು ಸಹಿಯನ್ನು ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಅದೇ ರೀತಿಯಾಗಿ ನಿಪಿಃ1 ರ ಪ್ರಾಂಸರಿ ಪತ್ರವನ್ನು ಬರೆದ ಬಿಕ್ಕಲಂದಾರರು ಸದರಿ ನಿಪಿಃ1 ರ ಪ್ರಾಂಸರಿ ಪತ್ರಕ್ಕೆ ಒಂದು ಸಹಿಯನ್ನು ಮಾಡಿರುತ್ತಾರೆ.

ನಾನು 10 ನೇಯ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ಸಾಮಾನ್ಯವಾಗಿ ಪ್ರಾಂಸರಿ ಪತ್ರದಲ್ಲಿ ಎರಡು ಭಾಗಗಳಿದ್ದು ಸದರಿ ಪತ್ರದ ಬಲಭಾಗದಲ್ಲಿ ಸಾಲವನ್ನು ಪಡೆದ ಸಾಲಗಾರರು ಬರೆದುಕೊಟ್ಟ ಪತ್ರವಾಗಿದ್ದು ಸದರಿ ಪತ್ರದ ಎಡಭಾಗದಲ್ಲಿ ಸದರಿ ಸಾಲಗಾರನು ಹಣ ಸಂದಾಯವಾದ ಬಗ್ಗೆ ಬರವಣಿಗೆಯನ್ನು ಬರೆದು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಪ್ರತಿವಾದಿಯು ನನ್ನ ಕಡೆಯಿಂದ ಸಾಲವನ್ನು ಪಡೆದ ದಿನ ನಿಪಿಃ1 ರ ಪ್ರಾಂಸರಿ ಪತ್ರದ ಎಡಭಾಗದ ಹಣ ಸಂದಾಯ ರಶೀದಿ ಪತ್ರವನ್ನು ಪ್ರತಿವಾದಿಯು ಬರೆಯುವುದರ ಬಗ್ಗೆ ಪ್ರತಿವಾದಿಯು ಕೇಳಿರುವುದಿಲ್ಲ ಆದ್ದರಿಂದ ಬಿಕ್ಕಲಂದಾರರು ಬರೆದಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿಃ1 ರ ಪ್ರಾಂಸರಿ ಪತ್ರವನ್ನು ನಾನು ಹೇಳಿ ಬರೆಸಿರುತ್ತೇನೆ. ಪ್ರತಿವಾದಿಯು ಹಣ ಸಂದಾಯ ರಶೀದಿಯನ್ನು ಬರೆಯಬೇಡ ಎಂದು ನನಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿಃ1 ರ ಪ್ರಾಂಸರಿ ಪತ್ರದೊಂದಿಗೆ ಹಣ ಸಂದಾಯ ರಶೀದಿ ಇದ್ದಲ್ಲಿ ಮಾತ್ರ ಸದರಿ ದಾಖಲೆಯು ಕಾನೂನುಬದ್ದ ದಾಖಲೆಯಾಗುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಸಾಲವನ್ನು ಪಡೆದ ನಂತರ ನಿಪಿಃ1 ರ ಪ್ರಾಂಸರಿ ಪತ್ರ ಮತ್ತು ಹಣ ಸಂದಾಯ ರಶೀದಿಗೆ ಸಹಿ ಮಾಡತಕ್ಕದ್ದು ಅದೇ ರೀತಿಯಾಗಿ ಸಾಕ್ಷಿದಾರರು ಮತ್ತು ಬಿಕ್ಕಲಂದಾರರು ಸದರಿ ಎರಡು ಪತ್ರಗಳಿಗೆ ಸಹಿ ಮಾಡತಕ್ಕದ್ದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸಾಕ್ಷಿಯು ಮುಂದುವರಿದು ನಿಪಿಃ1 ರ ಪ್ರಾಂಸರಿ ಪತ್ರಕ್ಕೆ ಸಹಿ ಮಾಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ.

ಸಾಮಾನ್ಯವಾಗಿ ನಿಪಿಃ1 ರ ಪ್ರಾಂಸರಿ ಪತ್ರಕ್ಕೆ ಸಾಲ ಪಡೆದ ಸಾಲಗಾರನು ರೆವಿನ್ಯೂ ಸ್ಟ್ಯಾಂಪ್ ನ ಮೇಲೆ ಮತ್ತು ಪತ್ರದ ಮೇಲೆ ಎರಡು ಕಡೆಗೆ ಸಹಿ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಿಪಿಃ1 ರ ಪ್ರಾಂಸರಿ ಪತ್ರಕ್ಕೆ ಸಹಿ ಮಾಡಿರುವ ಸಾಕ್ಷಿದಾರರು ನಮ್ಮ ಊರಿನವರು. ಅದೇ ರೀತಿಯಾಗಿ ನಿಪಿಃ1 ರ ಪ್ರಾಂಸರಿ ಪತ್ರವನ್ನು ಬರೆದ ಬಿಕ್ಕಲಂದಾರರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಬಿಕ್ಕಲಂದಾರರು ನಮ್ಮ ಕೂಲಸ್ಥರು. ನಿಪಿಃ1 ರ ಪ್ರಾಂಸರಿ ಪತ್ರವನ್ನು ಬೆಳಗಿನ ಸಮಯದಲ್ಲಿ ಬರೆದಿರುತ್ತಾರೆ, ನಿರ್ದಿಷ್ಟವಾದ ಸಮಯ ನನಗೆ ಗೊತ್ತಿಲ್ಲ. ಪ್ರತಿವಾದಿಯು ನನ್ನಿಂದ ಯಾವುದೇ ಸಾಲವನ್ನು ಪಡೆದಿರುವುದಿಲ್ಲ ಎಂದರೆ

ಸರಿಯಲ್ಲ. ಕಾರಣ ನನ್ನಿಂದ ಸಾಲವನ್ನು ತೆಗೆದುಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸಾಲವನ್ನು ನೀಡಿದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಣ ಸಂದಾಯ ರಶೀದಿಯನ್ನು ಹಾಜರುಪಡಿಸುತ್ತಿದ್ದೆ, ಸದರಿ ರಶೀದಿಯನ್ನು ಹಾಜರುಪಡಿಸದೆ ಇರುವುದರಿಂದ ನಾನು ಪ್ರತಿವಾದಿಗೆ ಸಾಲವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿಃ1 ರ ಪ್ರಾಂಸರಿ ಪತ್ರದಲ್ಲಿರುವ ಸಹಿಯು ಪ್ರತಿವಾದಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿಃ1 ರ ಪ್ರಾಂಸರಿ ಪತ್ರದಲ್ಲಿ ಪ್ರತಿವಾದಿಯ ಸಹಿಯನ್ನು ಸೃಷ್ಟಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರೊಂದಿಗೆ ಮತ್ತು ಬಿಕ್ಕಲಂದಾರರೊಂದಿಗೆ ಮಿಲಾಖೆಯಾಗಿ ನಿಪಿಃ1 ರ ಪ್ರಾಂಸರಿ ಪತ್ರವನ್ನು ಸೃಷ್ಟಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿಃ14-07-2019 ರಂದು ಸಾಲವನ್ನು ಮರುಪಾವತಿ ಮಾಡುವಂತೆ ಪ್ರತಿವಾದಿಗೆ ಯಾವ ತಾರೀಖು, ತಿಂಗಳಿನಿಂದು ಕೇಳಿದ್ದೆ ಎಂದು ನನಗೆ ನೆನಪಿಲ್ಲ. ಪ್ರತಿವಾದಿಗೆ ಸಾಲವನ್ನು ಕೊಟ್ಟಿದ್ದೆ ಎಂದು ಹೇಳುವ ಎರಡು ವರ್ಷಗಳ ನಂತರ ಮರುಪಾವತಿ ಮಾಡುವಂತೆ ಕೇಳಿರುತ್ತೇನೆ. ಪ್ರತಿವಾದಿಯು ಸಾಲವನ್ನು ಮರುಪಾವತಿ ಮಾಡುತ್ತೇನೆ ಎಂದು ನುಡಿದಿದ್ದರು. ಎರಡು ವರ್ಷಗಳ ನಂತರ ಸಾಲವನ್ನು ಮರುಪಾವತಿ ಮಾಡದಿದ್ದ ಕಾರಣ ಪ್ರತಿವಾದಿಗೆ ಯಾವುದೇ ಲೀಗಲ್ ನೋಟೀಸ್ ನೀಡಿರುವುದಿಲ್ಲ.

ದಿಃ13-02-2022 ರಂದು ನನ್ನ ಮತ್ತು ಪ್ರತಿವಾದಿಯ ನಡುವೆ ಆದ ರಾಜಿ ಪಂಚಾಯಿತಿಯಲ್ಲಿ ತಿಪ್ಪೇಸ್ವಾಮಿಯವರು ಹಾಜರಿದ್ದರು. ಸದರಿ ತಿಪ್ಪೇಸ್ವಾಮಿಯವರು ನನ್ನ ಸಂಬಂಧಿಕರಲ್ಲ. ಸದರಿ ತಿಪ್ಪೇಸ್ವಾಮಿಯವರ ಮನೆಗೆ ನನ್ನನ್ನು ಬರುವಂತೆ ಪ್ರತಿವಾದಿಯವರೇ ತಿಳಿಸಿರುತ್ತಾರೆ. ಸದರಿ ಪಂಚಾಯಿತಿಗೆ ನಾನು ಬರಲು ತಿಳಿಸಿದ್ದೆ. ಸದರಿ ಪಂಚಾಯಿತಿಯಲ್ಲಿ ನಾನು, ತಿಪ್ಪೇಸ್ವಾಮಿ ಮತ್ತು ಪ್ರತಿವಾದಿ ಇದ್ದೇವು. ನನ್ನ ವಾದ ಪತ್ರದಲ್ಲಿ ಪ್ರಾಂಸರಿ ಪತ್ರವನ್ನು Lapse ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ನಮೂದು ಮಾಡಿರುತ್ತೇನೆ ಅದರಂತೆ Lapse ಎಂದರೆ ಏನು ಎಂದು ನನಗೆ ಗೊತ್ತಿಲ್ಲ.

ನಾನು ನೀಡಿದ ಲೀಗಲ್ ನೋಟೀಸ್ ಗೆ ಪ್ರತಿವಾದಿಯು ಪ್ರತ್ಯುತ್ತರವನ್ನು ನೀಡಿರುತ್ತಾರೆ. ಆದರೆ ವಾದ ಪತ್ರದಲ್ಲಿ ಪ್ರತಿವಾದಿಯು ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ಯಾವುದೇ ಸಾಲವನ್ನು ನೀಡದೆ ಇರುವುದರಿಂದ ಈ ದಾವೆಗೆ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಸಹಿಯನ್ನು ತಿದ್ದುಪಡಿ ಮಾಡಿ ಒತ್ತಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜೀವನಕ್ಕಾಗಿ ಪ್ರತಿವಾದಿಯ ಜಮೀನನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಆದಾಯದಿಂದ ನನ್ನ

ಜೀವನವನ್ನು ಸಾಗಿಸುತ್ತಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಪ್ರತಿವಾದಿಗೆ ಸಾಲವನ್ನು ನೀಡುವಂತಹ ಪ್ರಮೇಯವೇ ಬರುವುದಿಲ್ಲ ಎಂದರೆ ಸರಿಯಲ್ಲ. ಕುರಿ ಮಾರಾಟ ಮಾಡಿ ಪ್ರತಿವಾದಿಗೆ ಸಾಲವನ್ನು ನೀಡಿದ ಬಗ್ಗೆ ನನ್ನ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ನಿಪಿಃ4 ರಲ್ಲಿ ರವಿ ಎಂದು ಅಂಚೆ ಸ್ವೀಕೃತಿಯಲ್ಲಿ ರವಿ ಎಂದು ಸಹಿ ಇರುತ್ತದೆ ಎಂದರೆ ಸರಿ. ನಿಪಿಃ4 ರಲ್ಲಿ ರವಿ ಎಂದು ಸಹಿ ಮಾಡಿರುವ ಅಕ್ಷರವು ಪ್ರತಿವಾದಿಯದ್ದು ಎಂದರೆ ನನಗೆ ಗೊತ್ತಿಲ್ಲ. ಸದರಿ ಲೀಗಲ್ ನೋಟೀಸ್ ಪ್ರತಿವಾದಿಗೆ ಜಾರಿಯಾದ ಬಗ್ಗೆ ನನ್ನ ವಕೀಲರ ಮುಖಾಂತರ ತಿಳಿದಿರುತ್ತದೆ. ಸದರಿ ಲೀಗಲ್ ನೋಟೀಸ್ ಪ್ರತಿವಾದಿಗೆ ಜಾರಿಯಾದ ಬಗ್ಗೆ ವಕೀಲರು ತಿಳಿಸಿರುತ್ತಾರೆ ಆದ್ದರಿಂದ ನನಗೆ ಗೊತ್ತು.

ನಿಪಿಃ1 ರ ಪ್ರಾಂಸರಿ ಪತ್ರದಲ್ಲಿರುವ ಪ್ರತಿವಾದಿಯ ಸಹಿ ಮತ್ತು ನಿಪಿಃ4 ರಲ್ಲಿರುವ ಪ್ರತಿವಾದಿಯ ಸಹಿ ಭಿನ್ನವಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಎರಡು ಸಹಿಗಳು ಬರೆದ ಆಕಾರದಲ್ಲಿ ಭಿನ್ನವಾಗಿದೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯು ಪಡೆದ ಸಾಲಕ್ಕೆ ಯಾವುದೇ ಬಡ್ಡಿಯನ್ನು ಪಾವತಿಸಿರುವುದಿಲ್ಲ. ಬಡ್ಡಿಯನ್ನು ನೀಡುವಂತೆ ನಾನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಯಾವುದೇ ಬೆಳೆ ಇರುವುದಿಲ್ಲ ಬಂದ ಕೂಡಲೇ ಕೊಡುತ್ತೇನೆ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ತಿಳಿಸಿರುತ್ತೇನೆ. ನಾನು ಪ್ರತಿವಾದಿಗೆ ಯಾವುದೇ ಸಾಲವನ್ನು ನೀಡಿರುವುದಿಲ್ಲ ಮತ್ತು ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಅಕ್ರಮ ದುರ್ಲಾಭವನ್ನು ಪಡೆಯುವುದರಿಂದ ನಿಪಿಃ1 ರ ಪ್ರಾಂಸರಿ ಪತ್ರವನ್ನು ಸೃಷ್ಟಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಜಮೀನನ್ನು ನನಗೆ ಗುತ್ತಿಗೆ ಮಾಡಲು ನೀಡದೆ ಇದ್ದ ಕಾರಣ ನಾನು ಪ್ರತಿವಾದಿಯ ವಿರುದ್ದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿಃ1 ರ ಪ್ರಾಂಸರಿ ಪತ್ರದಲ್ಲಿರುವ ಪ್ರತಿವಾದಿಯ ಸಹಿ ಮತ್ತು ನಿಪಿಃ4 ರಲ್ಲಿರುವ ಪ್ರತಿವಾದಿಯ ಸಹಿಯನ್ನು ಎಫ್ ಎಸ್ ಎಲ್ ವರದಿಗೆ ಕಳುಹಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.